
ಸಬರಮತಿ ನದಿ





# ಸಬರಮತಿಯ ಸಂತನ ಆಶ್ರಮದಲ್ಲಿ...



**ಗಾಂಧೀಜಿಯವರ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದ ಸ್ಮರಣಿಕೆಗಳ ಸಂಗ್ರಹ ಮಾತ್ರವೇ ಅಲ್ಲದೆ, ಗಾಂಧೀಜಿಯವರ ಜೀವನದ ವೈವಿಧ್ಯಮಯ ಚಾರಿತ್ರಿಕ ಘಟನೆಗಳ ನಿರೂಪಣೆ, ಪುಸ್ತಕಗಳು, ಹಸ್ತಪ್ರತಿಗಳು, ಛಾಯಾಪ್ರತಿಗಳು, ಸ್ವಾತಂತ್ರ್ಯ ಹೋರಾಟದ ಪ್ರಮುಖ ಚಟುವಟಿಕೆಗಳೆಲ್ಲದರ ಸಂಗ್ರಹ ಮತ್ತು ಪ್ರಾತ್ಯಕ್ಷಿಕೆ ಆಶ್ರಮದಲ್ಲಿದೆ.**

**■ ಕೆ.ಆರ್. ಉಮಾದೇವಿ ಉರಾಳ್**
ಚಿತ್ರ: ಕೆ.ಎನ್.ಉರಾಳ್

ದಕ್ಷಿಣ ಆಫ್ರಿಕಾದಲ್ಲಿ ಇಪ್ಪತ್ತೊಂದು ವರ್ಷಗಳನ್ನು ಕಳೆದ ಗಾಂಧೀಜಿಯವರು 1915 ರಲ್ಲಿ ಭಾರತಕ್ಕೆ ಹಿಂದಿರುಗಿದಾಗ ವಾಸವಾಗಿದ್ದು ಜೀವನ್‌ಲಾಲ್ ದೇಸಾಯಿಯವರ ಕೊಚರಬ್ ಬಂಗಲೆಯಲ್ಲಿ. ಪಶು ಸಂಗೋಪನೆ, ಕೃಷಿ, ಖಾದಿ ಇನ್ನಿತರ ಸೃಜನಾತ್ಮಕ ಕಾರ್ಯಗಳ ಅನುಷ್ಠಾನಕ್ಕಾಗಿ ಅವರಿಗೆ ಇನ್ನೂ ಹೆಚ್ಚಿನ ಜಾಗ ಬೇಕೆನ್ನಿಸಿತ್ತು. ದಂಡಿಯಾತ್ರೆ (17–6–1917) ಆರಂಭಿಸುವವರೆಗೂ ಕಸ್ತೂರಿಬಾ ಅವರೊಂದಿಗೆ ಗಾಂಧೀಜಿ ಇದೇ ಆಶ್ರಮದಲ್ಲಿದ್ದರು.

ಒಂದೆಡೆ ವಿದೇಶೀಯರ ನಿಯಂತ್ರಣದ ಜೈಲು, ಇನ್ನೊಂದೆಡೆ ಸ್ಮಶಾನ. ಒಬ್ಬ ಸತ್ಯಾಗ್ರಹಿ ಇವೆರಡರಲ್ಲಿ ಒಂದಕ್ಕೆ ಹೋಗಬೇಕಾದ ಅನಿವಾರ್ಯತೆ ಇರುವುದೆಂಬ ನಿರ್ಭಯತೆ ಮೈಗೂಡಿಸಿಕೊಳ್ಳಲು ಇದು ಸೂಕ್ತ ಸ್ಥಳ ಎಂದವರು ಭಾವಿಸಿದರು.

ಆಶ್ರಮದ ಕೆಳ ಭಾಗದಲ್ಲಿ ಮೈದುಂಬಿ ಹರಿವ ಸಬರಮತಿ ನದಿ. ದಂಡಿ ಯಾತ್ರೆಗೆ ಹೊರಡುವ ಮುನ್ನ ಸ್ವಾತಂತ್ರ್ಯ ಲಭಿಸುವವರೆಗೂ ಇಲ್ಲಿಗೆ ಹಿಂದಿರುಗುವುದಿಲ್ಲವೆಂಬ ಪ್ರತಿಜ್ಞೆ ಮಾಡಿದ್ದರು ಗಾಂಧೀಜಿ. ಸ್ವಾತಂತ್ರ್ಯ ನಂತರದ ಮತೀಯ ಗಲಭೆಗಳ ಉಪಶಮನಕ್ಕಾಗಿ ಉಪವಾಸಗಳು, ಬರಿಗಾಲ ನಡಿಗೆ ಎಂದೆಲ್ಲಾ ಅಲೆದಾಟ ಶುರುವಾಯ್ತು. 1948ರಲ್ಲಿ ಗಾಂಧೀಜಿ ಹತ್ಯೆಯಾದ ನಂತರ ಆಶ್ರಮದ ಸಂರಕ್ಷಣೆ, ನಿರ್ವಹಣೆ, ಇಲ್ಲಿನ ಚಟುವಟಿಕೆಗಳನ್ನು ನಡೆಯಿಸಿಕೊಂಡು ಹೋಗುವ ಹೊಣೆ 'ಗಾಂಧೀ ಸ್ಮಾರಕ ಸಂಗ್ರಹಾಲಯ' ಟ್ರಸ್ಟ್‌ನ ಹೆಗಲೇರಿತ್ತು. ಗಾಂಧೀಜಿಯವರು ವಾಸವಾಗಿದ್ದ ಇಲ್ಲಿನ 'ಹೃದಯ ಕುಂಜ' ಕುಟೀರವನ್ನು 1963 ರಲ್ಲಿ ನೆಹರೂ ಉದ್ಘಾಟಿಸಿದರು. ಅದೀಗ ಸುಸಜ್ಜಿತವಾದ ಸಂಗ್ರಹಾಲಯವಾಗಿ ರೂಪುಗೊಂಡಿದೆ.

ಸಬರಮತಿ ಆಶ್ರಮದ ನಡುವಿನಲ್ಲಿರುವುದೇ 'ಹೃದಯ ಕುಂಜ'. ಮಧ್ಯಭಾಗದಲ್ಲಿ ಇರುವುದರಿಂದ ಕಾಕಾಸಾಹೇಬ್ ಕಾಲೇಲ್ಕರ್‌ರವರು ಅದನ್ನು 'ಹೃದಯ ಕುಂಜ' ಎಂದು ಹೆಸರಿಸಿದ್ದರು. ದೇಶವಿದೇಶಗಳ ಖ್ಯಾತನಾಮರು ಇಲ್ಲಿ ಗಾಂಧೀಜಿಯವರನ್ನು ಭೇಟಿ ಮಾಡಿದ್ದರು. ಹೃದಯ ಕುಂಜದ ಎಡ ಭಾಗದಲ್ಲಿ ಗಾಂಧೀಜಿಯವರ ಕೊಠಡಿ ಇದೆ. ಇಲ್ಲಿ ಅವರು